**ಒ ಎಸ್ .ಸಂಖ್ಯೆಃ 257/2013**

**ಪಿ ಡಬ್ಲ್ಯೂಃ1**

**ದಿನಾಂಕಃ 17.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಮ್ ಬಿ ಕೆ  ಅವರಿಂದಃ**

1. ಈ ಹಿಂದೆ ನಾನು ನನ್ನ ತಾಯಿಗೆ ತಿಳಿಸದೆ ಆಕೆಯ ಸಹಿ ಪಡೆದು ನಾನು ದಾವೆ ಮಾಡಿದ್ದೆ ಎಂದರೆ ಸಾಕ್ಷಿಯು ನನ್ನ ತಾಯಿಯೇ ಮಾಡಿದ್ದಳು ಎಂದು ನುಡಿಯುತ್ತಾರೆ. ನೀವು ದಾವೆ ಮಾಡಿಲ್ಲವಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.
2. ದಾವಾ ಜಮೀನನ್ನು 1 ನೇ ಪ್ರತಿವಾದಿ ಸ್ವಂತ ಹಣದಿಂದ ತನ್ನ ಹೆಸರಿನಲ್ಲಿ ಖರೀದಿ ಹಿಡಿದಿರುತ್ತಾಳೆ ಎಂದರೆ ಸಾಕ್ಷಿಯು ನನ್ನ ತಾಯಿ ಮತ್ತು ಸಹೋದರ ಮಾವ ಹನಮಪ್ಪ ಹಿಡಿದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರವನ್ನು ನಾನು ನೋಡಿಲ್ಲ.
3. ನಾನು ನನ್ನ ತಾಯಿ ಶಾಖಾಪೂರದಲ್ಲಿ ಖರೀದಿ ಹಿಡಿದ ಹೊಲದ ಪಾಲಿನ ಸಲುವಾಗಿ ಕೇಸ ಮಾಡಿರುತ್ತೇನೆ. ಆ ಹೊಲ ನಮ್ಮ ಅವ್ವನ ಹೆಸರಿನಲ್ಲಿ ಇದೆ. ಖರೀದಿ ಮಾಡಿದಾಗಿನಿಂದಲೂ ಸಹ ಹೊಲ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದ್ದು, ಆಕೆಯೇ ಅಂದಿನಿಂದಲೂ ಸಹ ಸಾಗುವಳಿ ಮಾಡುತ್ತಿದ್ದಾಳೆ ಎಂದರೆ ನಮ್ಮ ಅವ್ವ ಹೊಲ ಹಿಡಿದಿರುತ್ತಾಳೆ, ನನ್ನ ಅಕ್ಕ ಸಾಗುವಳಿ ಮಾಡುತ್ತಿದ್ದಾಳೆ ಎಂದು ನುಡಿಯುತ್ತಾರೆ.

**ಟಿಪ್ಪಣಿಃ 1 ನೇ ಪ್ರತಿವಾದಿ ಮಾಡಿದ ಪಾಟೀಸವಾಲನ್ನು ಸಹ ತಮ್ಮ ಪರವಾಗಿ ಅಳವಡಿಸಿಕೊಳ್ಳಲು ಮಾನ್ಯ 2 ನೇ ಪ್ರತಿವಾದಿ ಪರ ವಕೀಲರು ವಿನಂತಿಸಿಕೊಂಡಿರುತ್ತಾರೆ.**

**ಮರುವಿಚಾರಣೆಃ ಇಲ್ಲ**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ.ಕೇ. ಸರಿ ಇದೆ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ. ನ್ಯಾ.ದಂಡಧಿಕಾರಿಗಳು, ಕುಷ್ಟಗಿ**